**ದಿನಾಂಕಃ 02-11-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4(ಎ) ದಿಂದ 4(ಎಫ್) ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ಕರೂರು ಗ್ರಾಮ ನನ್ನ ತವರು ಮನೆ ಎಂದರೆ ಸರಿ. ನನ್ನ ಗಂಡನ ಊರು ಶಿರಹಟ್ಟಿ ತಾಲೂಕ್ಕಿನ ಗಜನೂರು ಆಗಿದೆ. ನನ್ನ ಗಂಡ ಹಾಗೂ ನನ್ನ ಗಂಡನ ಮನೆಯವರು ಸುಮಾರು 30 ವರ್ಷಗಳಿಂದ ವಾಸವಾಗಿದ್ದಾರೆ. ಪ್ರತಿವಾದಿ 4(ಎ) ದಿಂದ 4(ಎಫ್) ಮತ್ತು 5 ನೇ ಪ್ರತಿವಾದಿಯರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ತಿಳಿದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಅದರ ಲಿಖಿತ ಹೇಳಿಕೆ ಜೊತೆ ಒಂದು ವಂಶಾವಳಿಯನ್ನು ಹಾಕಿದ್ದಾರೆ ಎಂದರೆ ಗೊತ್ತಿದೆ. ಪ್ರತಿವಾದಿ 4(ಎ) ದಿಂದ 4(ಎಫ್) ಮತ್ತು 5 ನೇ ಪ್ರತಿವಾದಿಯರು ಹಾಜರುಪಡಿಸಿರುವ ವಂಶಾವಳಿಯಲ್ಲಿ ಮೂಲಪುರುಷ ಭರಮಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ಹೇಳುತ್ತಾರೆ ಎಂದರೆ ಭರಮಪ್ಪನಿಗೆ 2 ಜನ ಮಕ್ಕಳು ಎಂದು ಬರೆಸಿರುತ್ತಾರೆ ಆದರೆ ಭರಮಪ್ಪನಿಗೆ 3 ಜನ ಮಕ್ಕಳು ಇದ್ದಾರೆ. ಭರಮಪ್ಪನಿಗೆ ಮಲ್ಲಪ್ಪ ಮತ್ತು ನಾಗಪ್ಪ ಎಂಬ ಇಬ್ಬರು ಮಕ್ಕಳು ಮಾತ್ರ ಇದ್ದಾರೆ ಎಂದರೆ ಸುಳ್ಳು.

2. ದಾವಾ ಆಸ್ತಿಗಳಿಗೆ ಸಂಬಂದಪಟ್ಟ ಕಂದಾಯ ದಾಖಲೆಗಳನ್ನು ಈ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ನೋಡಿದ್ದೀರಾ ಎಂದರೆ ನೋಡಿರುತ್ತೇನೆ. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಮೂಲ ಪುರುಷ ಭರಮಪ್ಪ ಮಕ್ಕಳಾದ ನಾಗಪ್ಪ ಹಾಗೂ ಮೃತ ಮಲ್ಲಪ್ಪ ರವರ ಮಕ್ಕಳ ನಡುವೆ 1955 ರಲ್ಲಿ ಪಾಲು ವಿಭಜನೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎಮ್ ಇ ನಂ.1770 ರ ಪ್ರಕಾರ ಮೂಲ ಪುರುಷ ಭರಮಪ್ಪನ ಮಗ ನಾಗಪ್ಪ ಮತ್ತು ಮೂಲ ಪುರುಷ ಭರಮಪ್ಪ ಹಿರಿಯ ಮಗ ಮಲ್ಲಪ್ಪ ಮಕ್ಕಳ ನಡುವೆ ಆಸ್ತಿಗಳು ಹಂಚಿಕೆಯಾದ ಬಗ್ಗೆ ಉಲ್ಲೇಖಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾವ ಆಧಾರದ ಮೇಲೆ ಮೂಲ ಪುರುಷ ಭರಮಪ್ಪನಿಗೆ ಕಾಳಾಚಾರಿ ಎಂಬ ಮಗನಿದ್ದ ಎಂಬ ಬಗ್ಗೆ ಯಾವುದಾದರೂ ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿಯೂ ಇದೆ ಎಂದು ಹೇಳುತ್ತಾರೆ. ಅದು ಯಾವ ದಾಖಲೆ ಎಂದರೆ ಹಿಂದಿನ ಕಾಲದ ದಾಖಲೆ ಅದು ನನಗೆ ಸರಿಯಾಗಿ ಗೊತ್ತಿಲ್ಲ.

3. ನಾನು ನೋಡಿರುವಂತಹ ಹಿಂದಿನ ಕಾಲದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಆ ಹಿಂದಿನ ಕಾಲದ ದಾಖಲೆಯಲ್ಲಿ ಭರಮಪ್ಪನ ಮಗ ಕಾಳಾಚಾರಿ ಎಂದು ಬರೆದಿದೆಯಾ ಎಂದರೆ ಬರೆದಿದೆ. ಆ ಹಿಂದಿನ ಕಾಲದ ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವ ದಾಖಲೆ ಇದೆ ಎಂದರೆ ನನಗೆ ಗೊತ್ತಿಲ್ಲ. ಕರೂರು ಗ್ರಾಮದಲ್ಲಿ ಕನ್ನಡ ಮಾದರಿ ಶಾಲೆ ಬ್ರಿಟಿಷರ ಕಾಲದಿಂದಲೂ ಇದೆ ಎಂದರೆ ನಿಜ. ಆ ಶಾಲೆಯಲ್ಲಿ ದಾಖಲೆಗಳು ಸಿಗುತ್ತವೆ ಎಂದರೆ ಕಾಳಾಚಾರಿ ಶಾಲೆಗೆ ಸೇರಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಕಾಳಾಚಾರಿ ಶಾಲೆಗೆ ಸೇರಿಲ್ಲ ಎಂದು ಯಾರು ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಕಾಳಾಚಾರಿಯ ಮಗಳು ತುಂಗಮ್ಮ ಶಾಲೆಗೆ ಸೇರಿದ್ದಳೇ ಎಂದರೆ ಇಲ್ಲ. ಕಾಳಾಚಾರಿ ಮತ್ತು ಕಾಳಮ್ಮ ರವರ ಮಗಳು ತುಂಗಮ್ಮ ಎಂದು ಯಾವ ದಾಖಲೆಯಲ್ಲಿ ಬರೆದಿದೆ ಎಂದರೆ ಹಿಂದಿನ ಕಾಲದ ದಾಖಲೆಯಲ್ಲಿ ಬರೆದಿದೆ.

4. ಹಿಂದಿನ ಕಾಲದ ದಾಖಲೆಯನ್ನು ಹೊರತುಪಡಿಸಿ ಕಾಳಾಚಾರಿ ಹಾಗೂ ಕಾಳಮ್ಮ ರವರ ಮಗಳು ತುಂಗಮ್ಮ ಎಂದು ತೋರಿಸಲು ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಈಗ ನನಗೆ 53 ವರ್ಷ ಎಂದರೆ ಸರಿ. 53 ವರ್ಷದ ಅವಧಿಯಲ್ಲಿ ಕಾಳಾಚಾರಿ ಹುಟ್ಟಿರುವ ಬಗ್ಗೆ ಹಾಗೂ ಆತನಿಗೆ ತುಂಗಮ್ಮ ಎಂಬ ಬಗ್ಗೆ ಮಗಳು ಇರುವ ಬಗ್ಗೆ ದಾಖಲೆಗಳನ್ನು ನೋಡಿದ್ದೀರಾ ಎಂದರೆ ನನ್ನ ಅಜ್ಜಿ ತುಂಗಮ್ಮನಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಕಾಳಾಚಾರಿ ಮತ್ತು ಕಾಳಮ್ಮ ರವರಿಗೆ ತುಂಗಮ್ಮ ಎಂಬ ಮಗಳು ಇದ್ದಳು ಆ ಮಗಳಿಗೆ ಗುಡ್ಡಾಚಾರಿ ಹಾಗೂ ಜಕಣಾಚಾರಿ ಎಂಬ ಇಬ್ಬರು ಮಕ್ಕಳಿದ್ದರು ಎಂದು ತುಂಗಮ್ಮ ರವರು ಮಾಹಿತಿ ಕೊಟ್ಟಿರುವ ಪ್ರಕಾರ ಹೇಳುತ್ತಿದ್ದೇನೆ ಎಂದರೆ ಸರಿ. ಈ ವಿಚಾರಗಳನ್ನು ನನ್ನ ಅಜ್ಜಿ ತುಂಗಮ್ಮ ಯಾವ ವರ್ಷ ದಲ್ಲಿ ಹೇಳಿದ್ದಾರೆ ಎಂದರೆ ನಾನು 13-14 ನೇ ವಯಸ್ಸಿನಲ್ಲಿ ಶಾಲೆಗೆ ಹೋಗುತ್ತಿದ್ದಾಗ ಹೇಳುತ್ತಿದ್ದರು ಎಂದು ಹೇಳುತ್ತಾರೆ.

5. ತುಂಗಮ್ಮ ನನಗೆ ಮೇಲ್ಕಂಡ ವಿಚಾರಗಳನ್ನು ಹೇಳುವಾಗ ತುಂಗಮ್ಮನ ಗಂಡ ನಾಗೇಂದ್ರ ಮತ್ತು ಆಕೆಯ ಮಕ್ಕಳು ಗುಡ್ಡಾಚಾರಿ ಮತ್ತು ಜಕಣಾಚಾರಿ ರವರು ಇದ್ದರು ಎಂದರೆ ನಿಜ. ನಾನು 13-14 ವಯಸ್ಸಿನಲ್ಲಿದ್ದಾಗ ತುಂಗಮ್ಮ ನನಗೆ ನಾವು ಮೂಲಪುರುಷನ ಮೊದಲ ಮಗ ಕಾಳಾಚಾರಿಯ ಮಕ್ಕಳು ಎಂದು ಹೇಳುವ ಕಾಲಕ್ಕೆ ತುಂಗಮ್ಮ, ನಾಗೇಂದ್ರಪ್ಪ, ಜಕಣಾಚಾರಿ ಹಾಗೂ ಗುಡ್ಡಾಚಾರಿ ಜೀವಂತವಾಗಿ ಇದ್ದರು ಎಂದರೆ ಇದ್ದರು. ಆ ಕಾಲಕ್ಕೆ

ಭರಮಪ್ಪನ ಆಸ್ತಿಯಲ್ಲಿ ನಮಗೆ ಭರಮಪ್ಪನ ಆಸ್ತಿಯಲ್ಲಿ ಹಿಸ್ಸೆ ಬರಬೇಕು ಎಂಬ ವಿಚಾರ ಗೊತ್ತಿತ್ತಾ ಎಂದರೆ ನನಗೆ ಗೊತ್ತಿಲ್ಲ. ಭರಮಪ್ಪನ ಆಸ್ತಿಯಲ್ಲಿ ನಮಗೂ ಆಸ್ತಿ ಬರಬೇಕು ಎಂದು ನಾಗೇಂದ್ರಪ್ಪ, ಗುಡ್ಡಾಚಾರಿ ಹಾಗೂ ಜಕಣಾಚಾರಿ ಇವರಿಗೆ ಗೊತ್ತಿತ್ತಾ ಎಂದರೆ ಗೊತ್ತಿತ್ತು. ಅವರ ಜೀವಿತ ಕಾಲದಲ್ಲಿ ಆಸ್ತಿಯಲ್ಲಿ ಹಿಸ್ಸೆ ತೆಗೆದುಕೊಳ್ಳಲು ಯಾವುದಾದರೂ ಕಾನೂನು ಕ್ರಮ ತೆಗೆದುಕೊಂಡಿದ್ದಾರೆಯೇ ಎಂದರೆ ಇಲ್ಲ. ಆ ರೀತಿ ಕಾನೂನು ಕ್ರಮ ತೆಗೆದುಕೊಳ್ಳಲು ಅವರಿಗೆ ತೊಂದರೆ ಇರಲಿಲ್ಲ ಎಂದರೆ ಅವರು ಆಸ್ತಿಯಲ್ಲಿ ಹಿಸ್ಸೆ ಕೇಳುತ್ತಿದ್ದರು ಹಾಗೂ ಅವರು ಅವರಿಗೆ ಹೊಡೆಯುವುದು, ಬಡಿಯುವುದು ಮಾಡುತ್ತಿದ್ದರು ಹೀಗಾಗಿ ಅವರು ಪಾಲು ಕೇಳಿಲ್ಲ.

6. ಅವರು ಹೆದರಿಸಿರುವ ಬಗ್ಗೆ ಹಾಗೂ ಹೊಡಿ ಬಡಿ ಮಾಡಿರುವ ಬಗ್ಗೆ ಯಾವುದಾದರೂ ಠಾಣೆಯಲ್ಲಿ ದೂರು/ಪ್ರಕರಣ ದಾಖಲಾಗಿದೆಯಾ ಎಂದರೆ ಇಲ್ಲ. ಮೂಲ ಪುರುಷ ಭರಮಪ್ಪನಿಗೆ ಕಾಳಾಚಾರಿ ಎಂಬ ಮಗನಿಲ್ಲದ ಕಾರಣ ಆತನ ಆಸ್ತಿಯಲ್ಲಿ ಯಾವುದೇ ಪಾಲು ಕೇಳಿಲ್ಲ ಎಂದರೆ ಸರಿಯಲ್ಲ. ನಾನು ಎಲ್ಲಾ ದಾವಾ ಆಸ್ತಿಗಳನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. ನಾನು ದಾವಾ ಆಸ್ತಿಗಳ ಪೈಕಿ ಯಾವ ಆಸ್ತಿಗಳಲ್ಲಿ ಕಬ್ಜಾದಲ್ಲಿದ್ದೀರಾ ಎಂದರೆ ಎಲ್ಲಾ ಆಸ್ತಿಗಳಲ್ಲಿ ಕಬ್ಜಾದಲ್ಲಿ ಇದ್ದೇನೆ. ದಾವಾ 1 ನೇ ಆಸ್ತಿ ಎಷ್ಟು ಎಕರೆ ಎಷ್ಟು ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ 1 ನೇ ಆಸ್ತಿಯಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದೀರಾ ಎಂದರೆ ಸಾಕ್ಷಿಯೂ ಅದು ಭಾಗ ಆಗಿಲ್ಲ ಎಂದಾಗ ಎಷ್ಟು ಎಕರೆ ಎಷ್ಟು ಗುಂಟೆಯಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಅದೇ ರೀತಿ ದಾವಾ ಆಸ್ತಿ 2 ರಿಂದ 13 ಸ್ವತ್ತುಗಳಲ್ಲಿ ಎಷ್ಟು ಎಕರೆ ಎಷ್ಟು ಗುಂಟೆಯಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ಹೇಳಲು ಆಗುವುದಿಲ್ಲ.

7. ದಾವಾ ಆಸ್ತಿಗಳ ಪೈಕಿ ಯಾವ ಯಾವ ಆಸ್ತಿ ಉತಾರಗಳು ಯಾರ ಯಾರ ಹೆಸರಿನಲ್ಲಿದೆ ಎಂದು ನೋಡಿದ್ದೀರಾ ಎಂದರೆ ನಾಗಪ್ಪ ಮತ್ತು ಮಲ್ಲಪ್ಪನ ಹೆಸರಿನಲ್ಲಿವೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ನಾಗಪ್ಪ ಮತ್ತು ಮಲ್ಲಪ್ಪನ ಹೆಸರಿನಲ್ಲಿ ಇರುವುದಿಲ್ಲ ಹಾಗೂ ನಾನು ದಾವಾ ಆಸ್ತಿಗಳಲ್ಲಿ ಯಾವುದೇ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಈಗಲೂ ಪ್ರತಿವಾದಿಯರು ಸ್ವಾಧೀನಾನುಭವದಲ್ಲಿದ್ದು ಅವರ ಅನುಕೂಲಕ್ಕೆ ತಕ್ಕಂತೆ ಬ್ಯಾಂಕ್ ಗಳಲ್ಲಿ ಸಾಲ ಪಡೆದುಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದರೆ

ಸರಿಯಲ್ಲ. ನಾನು 13-14 ವಯಸ್ಸಿನಲ್ಲಿದ್ದಾಗ ತುಂಗಮ್ಮ ನನಗೆ ನಾವು ಮೂಲಪುರುಷನ ಮೊದಲ ಮಗ ಕಾಳಾಚಾರಿಯ ಮಕ್ಕಳು ಎಂದು ನಾನು ಹುಟ್ಟಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮೂಲ ಪುರುಷ ಭರಮಪ್ಪನ ಕುಟುಂಬದ ಬಗ್ಗೆ ಮಾಹಿತಿ ಇದೆಯಾ ಎಂದರೆ ಇದೆ. ಮೂಲ ಪುರುಷ ಭರಮಪ್ಪನ ಹೆಂಡತಿ ಹೆಸರು ಗೊತ್ತಿದೆಯಾ ಎಂದರೆ ನನಗೆ ಗೊತ್ತಿಲ್ಲ. ಮೂಲ ಪುರುಷ ಭರಮಪ್ಪ ಯಾವಾಗ ಮೃತಪಟ್ಟಿದ್ದಾರೆ ಎಂದರೆ 1934 ರಲ್ಲಿ ಮೃತಪಟ್ಟಿದ್ದಾರೆ ನನ್ನ ಬಳಿ ದಾಖಲೆ ಇಲ್ಲ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.